No KRNN 12

21-3-75

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

In ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper

Satyavadi Daily
Mysore 4

– For Influential Publicity –

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ 8 ಪುಟ

ಮೈನಸ್ ಸರ್ಕಾರ ವಜಾ ಮಾಡುವಂತೆ ಕರೆ

ಸತ್ಯ ಮಾರ್ಗ

ಸಕಲ ವೇದಾರ್ಥಗಳನ್ನು ತಿಳಿದಿರುವುದು, ಸಮಸ್ತ ತೀರ್ಥಗಳಲ್ಲಿ ಸ್ನಾನ ಮಾಡಿರುವುದು, ಈ ಸತ್ಕಾರ್ಯಗಳು, ಸಜ್ಜನರಿಗೆ ಹಿತಕರವಾದ ಮಾರ್ಗವನ್ನು ಬೋಧಿಸಿದಷ್ಟು ಸಮಾನವಾಗುತ್ತದೋ ಅಥವಾ ಅದಕ್ಕಿಂತಲೂ ಮಿಗಿಲೆಂದನ್ನಿಸಿಕೊಳ್ಳುತ್ತದೋ ? ಹೇಳಲು ಸಾಧ್ಯವಿಲ್ಲ !

●

ಒಂದು ಸಹಸ್ರ ಅಶ್ವಮೇಧಯಜ್ಞದ ಫಲವೂ ಸತ್ಕಾರ್ಯದಿಂದುಂಟಾದ ಫಲವೂ ತಕ್ಕಡಿಯಲ್ಲಿ ತೂಗಲ್ಪಟ್ಟಾಗ, ಸಹಸ್ರ ಅಶ್ವಮೇಧದ ಫಲಕ್ಕಿಂತಲೂ ಸತ್ಯ ಮಾರ್ಗದ ಫಲವೇ ಹೆಚ್ಚಾಗಿ (ಭಾರವಾಗಿ) ಕಂಡುಬಂದಿರುತ್ತದೆ.

●

ಸತ್ಯಮಾರ್ಗದಿಂದಿರುವದಾಗಿ ದೇವತೆಗಳೂ ಪಿತೃಗಳೂ ಬ್ರಾಹ್ಮಣರೂ ತೃಪ್ತಿಯನ್ನು ಹೊಂದುತ್ತಾರೆ. ಅದುದರಿಂದ ಸತ್ಯವನ್ನು ಅತ್ಯುತ್ತಮ ಧರ್ಮವೆಂದು ಹೇಳುತ್ತಾರೆ. ಅದುಕಾರಣ ಸತ್ಯವನ್ನು (ಸಜ್ಜನರಿಗೆ ಹಿತಕರವಾದ ಮಾರ್ಗವನ್ನು) ಹಾಳುಮಾಡಬಾರದು

ವುಡ್‌ಲಾಂಡ್ 21 3 75 ರಿಂದ

ಅವೋಫ 4 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್, ಬಾಲಕೃಷ್ಣ, ಕಲ್ಪನ, ಆರತಿ ದಿನ 56 ಪ್ರದರ್ಶನಗಳು

ಅಪೆರಾ 21 3 75 ರಿಂದ

ಮನಸಾಕ್ಷಿ

ಅವೋಫ ಕನ್ನಡ ಚಿತ್ರ,

ಪಾತ್ರ ರಾಜಕುಮಾರ್ ಭಾರತಿ ದಿನ 3 ಪ್ರದರ್ಶನಗಳು

ಮಂತ್ರಿಗಳ ಮನೆಗೆ ಅಗ್ನಿ ಸ್ಪರ್ಶ

ನೀಚರು ತ್ರಿಪುರಾದ ಗುಡ್ಡಗಾಡು ಕಲ್ಯಾಣ ಮಂತ್ರಿ ಶ್ರೀ ಹರಿಚರಣ ಚೌಧರಿಯವರ ಮನೆಗೆ ಅಗ್ನಿ ಸ್ಪರ್ಶ ಮಾಡಿ ಸಂಪೂರ್ಣ ದಹನ ಮಾಡಿದರು.

★

ಮಂತ್ರಿಮಂಡಲ ರದ್ದತಿಗೆ ಕರೆ

ರಾಜ್ಯಪಾಲರನ್ನು ಶ್ರೀ ಇ ಎಂ ಎಸ್ ನಂಬೂದರಿಪಾದರೊಡನೆ ಸಂದರ್ಶನ ಪಡೆದ ವಿರೋಧ ಪಕ್ಷದ ಸದಸ್ಯರು ಅಚ್ಯುತ ಮೆನನ್ ನೇತೃತ್ವದ ಕೇರಳ ಮಂತ್ರಿಮಂಡಲ ರದ್ದಾಗಬೇಕೆಂದು ಕರೆ ನೀಡಿದರು.

○

ಚನ್ನಬಸಪ್ಪನವರ ಬಗ್ಗೆ

ಸರ್ಕಾರದ ನಿಲುವಿಗೆ ವಿರೋಧವಾಗಿ ದಾವಣಗೆರೆಯಲ್ಲಿ ಕಳೆದ ತಿಂಗಳು ಲೋಕೋಪಯೋಗಿ ಇಲಾಖೆಯ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಕಾನೇರಿ ಕಣಿವೆ ರಚನೆ ಕುರಿತು ಬಹಿರಂಗ ಹೇಳಿಕೆ ನೀಡಿದುದಕ್ಕೆ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅವರನ್ನು ಪ್ರಶ್ನಿಸಿತು.

★

ಬಹಾಯ್ ಸಂಸ್ಥೆ

ನೂತನ ವರ್ಷದ ದಿನಾಚರಣೆಯನ್ನು ಈ ತಿಂಗಳು 21 ರಂದು ಪ್ರಪಂಚದ ಅಧ್ಯಂತ ಬಹಾಯ್‌ಗಳು ನಡೆಸುವರು.

★

ಚಾರ್ಜ್‌ಷೀಟ್

ಕಳೆದ ಜನವರಿ 8 ರಂದು ಪಡುಪರಾರ ಗ್ರಾಮದಲ್ಲಿ ಪಂಚಾಯತಿ ಅಧ್ಯಕ್ಷೆ ಭಾಸ್ಕರ ಸೇಮಿತ ಅವರ ಕೊಲೆ ಸಂಬಂಧದಲ್ಲಿ ಮಂಗಳೂರಿನ ಮೊದಲನೆ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ಮುಂದೆ ಚಾರ್ಜ್‌ಷೀಟ್ ದಾಖಲು ಮಾಡಲಾಯಿತು.

ಮಂತ್ರಿಯವರ ಭರವಸೆ

ಭೂ ಸುಧಾರಣೆ ಖಾತೆಯ ಸಹಾಯಕ ಮಂತ್ರಿ ಶ್ರೀ ಸುಬ್ಬಯ್ಯ ಶೆಟ್ಟರು ಇತ್ತೀಚೆಗೆ ಇಲ್ಲಿ ಮಾತನಾಡುತ್ತಾ, ರಾಜ್ಯದ ಭೂ ಸುಧಾರಣೆ ಶಾಸನಕ್ಕೆ ಸಮಾಜದ ಯಾವುದೇ ವರ್ಗಕ್ಕೆ ಅನ್ಯಾಯ ಮಾಡುವ ಇಚ್ಛೆ ಇಲ್ಲವೆಂದೂ ತಿಳಿಸಿದರು. ಕಾನೂನಿನ ತಿದ್ದುಪಡಿ ಅಗತ್ಯ ಎನಿಸಿದರೆ ಅದಕ್ಕೆ ಸರ್ಕಾರ ಸಿದ್ಧ ಎಂದು ಅವರು ತಿಳಿಸಿದರು.

ಮಂಡ್ಯದಲ್ಲಿ ಅಪಹರಣ

ಮಂಡ್ಯದಲ್ಲಿ ಡೈರಿ ಮಾಲೀಕರಾದ ಶ್ರೀ ಕೃಷ್ಣಪ್ಪ ಎಂಬವರು ತನ್ನ ಮನೆಯಲ್ಲಿ ಇದ್ದಾಗ ಎರಡು ಕಾರುಗಳಲ್ಲಿ ಹನ್ನೆರಡು ಜನರ ತಂಡ ಬಂದು ಅವರ ಹೆಸರು ಹಿಡಿದು ಕೂಗಿದರು. ಧ್ವನಿ ಕೇಳಿದ ನಂತರ ಅವರು ಹೊರಬರಲು ಅವರನ್ನು ಕಾರಿಗೆ ಹಾಕಿಕೊಂಡು ಪರಾರಿ ಆದರೆಂದು ವರದಿ. ಬಂದವರು ಜಾಕು ತೋರಿದ ಕಾರಣ ಮನೆಯವರು ಅಸಹಾಯಕರಾಗಿದ್ದರೆಂದು ವರದಿಯಾಗಿದೆ.

ಲಸಿಗಳಿಗೆ ಭರ್ತಿ

ಕರ್ನಾಟಕ ಆರೋಗ್ಯ ಇಲಾಖೆಯಲ್ಲಿ ಕಾಂಪೌಂಡರ್, ದಾದಿಯರು, ಆರೋಗ್ಯ ಸಂದರ್ಶಕರು ಮತ್ತು ಸೂಲಗಿತ್ತಿಯರು ಇವರನ್ನು ಮಂಜೂರಾದ ಹುದ್ದೆಗಳಿಗೆ [illegible] ನೇಮಿಸಲಾಗುವದು.

ಕೇಂದ್ರದ ಯೋಜನೆ

ಮುಂದಿನ ಸಾಲಿನಲ್ಲಿ ಕರ್ನಾಟಕರಾಜ್ಯದಲ್ಲಿ ಕೇಂದ್ರ ಸರ್ಕಾರ ಮತ್ತು ಕೇಂದ್ರದ ನೆರವು ಇರುವ ಸಂಸ್ಥೆಗಳ ಆಶ್ರಯದಲ್ಲಿ 3 ಯೋಜನೆಗಳನ್ನು ಕೇಂದ್ರ ಶಿಕ್ಷಣ ಶಾಖೆ ಮಂಜೂರು ಮಾಡಿದೆ.

ಮಾರ್ಚ್ 28 ರಿಂದ ಕರ್ನಾಟಕ ಮತ್ತು ಬೊಂಬಾಯಿ ನಡುವೆ 5 ದಿನಗಳ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯ ನಡೆಯಲಿದೆ

ಕೃಷಿ ಮಾಡಿದರೆ ಕನ್ನಡ ವಾಚನ ಎಲ್ಲರಿಗೂ ಸಾಧ್ಯ — ರಾಜರತ್ನಂ

★

" ಪ್ರಾಚೀನ ಪದ್ಯವಾಚನವಾಗಲೀ ಮತ್ತಾವುದೇ ಕಾವ್ಯವಾಚನವಾಗಲೀ ಸ್ವಲ್ಪ ಅಭ್ಯಾಸ ಮಾಡಿದರೆ ಎಲ್ಲರಿಗೂ ಸಾಧ್ಯ " ಎಂದು ಅಭಿಪ್ರಾಯಪಟ್ಟ ಖ್ಯಾತ ಸಾಹಿತಿ ಶ್ರೀ ಜಿ. ಪಿ. ರಾಜರತ್ನಂರವರು, ಗಮಕ ವಾಚನಕ್ಕೆ ಮಾತ್ರ ಸಂಗೀತ ಗೊತ್ತಿರಬೇಕಾದ್ದು ಅಗತ್ಯ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 74 ರವೆಂಬರು 18 ರಂದು " ಪ್ರಾಚೀನ ಪದ್ಯ ವಾಚನ " ಕುರಿತು ನೋದಾಹರಣವಾಗಿ ಮಾತನಾಡಿದ ಶ್ರೀ ರಾಜರತ್ನಂರವರು " ಹೊಸತನಗಳು ಬಂದಹಾಗೆಲ್ಲಾ ಹಳೆತನಗಳು ಮುಚ್ಚಿಹೋಗುತ್ತವೆ ; ಹಳೆಗನ್ನಡ ಇಂದು ಹುಲಿಗನ್ನಡವಾಗಿದೆ ; ಇದರ ಮುಖವಾಡ ತೆರೆದು ಒಳಗೆ ಇಣಿಕಿದರೆ ಸೌಮ್ಯ ಕನ್ನಡ ಕಾಣಿಸಿಕೊಳ್ಳುತ್ತದೆ ; ಹತ್ತಿರ ಹೋಗೋಣ ಎನ್ನಿಸುತ್ತೆ " ಎಂದು ಪ್ರಾಚೀನ ಎಂದು ನಾವು ಕರೆಯುತ್ತಿರುವ ಕನ್ನಡವನ್ನು ಕುರಿತು ಬಣ್ಣಿಸಿದರು

ಪ್ರಾಚೀನ ಕಾವ್ಯವನ್ನು ನಾವು ಯಾವ ಕಾರಣಕ್ಕಾಗಿ ಜನಸಾಮಾನ್ಯ ತೆರೆದಿಟ್ಟುಕೊಳ್ಳುತ್ತಾನೆ ? ಎಂದು ಪ್ರಶ್ನಿಸಿದ ರಾಜರತ್ನಂರವರು, ನಮ್ಮಲ್ಲಿ ಯಾವುದೇ ಕೆಲಸ ಮಾಡಲು ಅವಕಾಶ ಕಡಮೆ, ಅವಕಾಶವಿದ್ದರೆ ಸೌಲಭ್ಯ ಕಡಮೆ, ಎಂದರು.

ಪದ್ಯ ಓದುವುದು ಸಂತೋಷಕ್ಕಾಗಿ, ಈ ಸಂತೋಷ ಉಂಟಾಗುವುದು ಪದ ಸಮೂಹಗಳ ಅರ್ಥಬಾಹುಳ್ಯದಿಂದ ; ಪ್ರಾಚೀನ ಪದ್ಯ ವಾಚನ ಮಾಡುವಾಗ ಪದಗಳನ್ನು ಅರ್ಥಮಾಡಿಕೊಂಡಿರಬೇಕು ; ಅಪಾರ್ಥ ಮಾಡಿಕೊಂಡು ಅಸಂಬದ್ಧವಾಗಿ ಓದಿದರೆ ಮೂಲ ಕೃತಿಗೆ, ಕವಿಗೆ ಅಪಚಾರ ಮಾಡಿದಂತಾಗುತ್ತದೆ ಎಂದು ಶ್ರೀ ರಾಜರತ್ನಂ ಅಭಿಪ್ರಾಯಪಟ್ಟರು. — ಕನ್ನಡ ನುಡಿ

For Large Range of Daily Wear

Nylex, Cotton, Voile, etc Sarees

in up-to-date Designs

★

Please Visit :

Bank Road Bahusar

Silver Jubilee of Gorakshana

When Journals devoted to the pious and noble cause of cow-protection, kindness to animals, ahimsa, etc , are very few and dharmic papres are short-lived, it is rejoicing that the 'Gorakshana ' will be celebrating its uniqe Silver jubilee early and in a befitting manner. Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered

Editor ' Gorakshana " Chamarajapuam, Mysore 4

SHAKTI SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Mysore 1

Protect the Cow

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ



Help The Gorakshana

—Humanitarian Propoganda Monthly....

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore